


International Journal of Kannada Research
www.kannadajournal.com

**ISSN: 2454–5813**
IJKR 2023; 9(2): 171-174
© 2023 IJKR
www.kannadajournal.com
Received: 01-05-2023
Accepted: 04-06-2023

**Dr. Chandra Shekara P**
Assistant Professor, Department of Kannada, GFGC, Siddartha Layout, Mysore, Karnataka, India

**Corresponding Author:**
**Dr. Chandra Shekara P**
Assistant Professor, Department of Kannada, GFGC, Siddartha Layout, Mysore, Karnataka, India

# ಜಾಗತಿಕ ಸ್ತ್ರೀವಾದಗಳ ಪರಿಚಯ

**Dr. Chandra Shekara P**

**DOI:** https://doi.org/10.22271/24545813.2023.v9.i2c.834

**ಪೀಠಿಕೆ**

ಸ್ತ್ರೀವಾದವು ಜಾಗತಿಕವಾಗಿ ಇಂದು ವಿಶಿಷ್ಟವಾದ ಹಂತದಲ್ಲಿದೆ. ಶ್ರೇಣೀಕೃತ ಜಾತಿ ಧರ್ಮ ವ್ಯವಸ್ಥೆಯ ಹಂದರದಲ್ಲಿ ಸ್ತ್ರೀವಾದವು ತನ್ನ ಹೋರಾಟವನ್ನು ಹಾಗೂ ಹೆಣೆದುಕೊಳ್ಳಬೇಕಿದೆ. ಇಂದು ಸ್ತ್ರೀವಾದಕ್ಕೆ ಇರುವ ಮುಖ್ಯ ಸವಾಲುಗಳು ಬಹಳವಾಗಿವೆ. ಮಹಿಳೆಯಾಗಿ ತಾನು ಅನುಭವಿಸುವ ತಾರತಮ್ಯವನ್ನು ಅತ್ಯಂತ ಜಾಣೆಯಿಂದ ನಿಭಾಯಿಸಬೇಕಾದ ಅನಿವಾರ್ಯತೆ ಸ್ತ್ರೀಗಿದೆ. ಜಾಗತಿಕವಾಗಿ ಇರುವ ಸಮಾಜದ ಶ್ರೇಣೀಕೃತ ವ್ಯವಸ್ಥೆಯಲ್ಲಿ ಉಳ್ಳವರು, ಮೇಲ್ವರ್ಗದ ಪುರುಷರು, ಮೇಲ್ವರ್ಗದ ಮಹಿಳೆಯರು ಧರ್ಮಾಂಧರು ಹೀಗೆ ಇವರುಗಳ ದಬ್ಬಾಳಿಕೆಗೆ ಒಳಗಾಗುವ ಸ್ಥಿತಿ ಜಗತ್ತಿನಾದ್ಯಂತ ಪ್ರಸ್ತುತ. ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಹೋರಾಟವನ್ನು ರೂಪಿಸಿಕೊಳ್ಳಲೇಬೇಕಾದ ಸ್ಥಿತಿ ಇಂದು ಅಗತ್ಯವಾಗಿದೆ. ಈ ಹೊತ್ತಿನಲ್ಲಿ ಮಹಿಳಾವಾದ ಮತ್ತು ಅದರ ರಚನಾ ವೈವಿಧ್ಯತೆಯನ್ನು ಅವಲೋಕಿಸುವುದು ಮುಖ್ಯ.

ಸ್ತ್ರೀವಾದಿ ಚಳವಳಿ ಎಂದರೆ ಗಂಡಿನ ಅಧಿಕಾರವನ್ನು ಕಸಿದುಕೊಳ್ಳುವುದಲ್ಲ ಬದಲಿಗೆ ಗಂಡಿನ ಸರ್ವಾಧಿಕಾರವನ್ನು ಪ್ರಶ್ನಿಸುವುದು. ತಮಗಾದ, ತಮಗಾಗುತ್ತಿರುವ ಅನ್ಯಾಯದ ಬಗೆಗೆ ಧ್ವನಿ ತೆಗೆದು ಮುಂದೆ ಇಂತಹ ಅನ್ಯಾಯ ಆಗದಂತೆ ಎಚ್ಚರಿಸುವ ಒಂದು `ಎಚ್ಚರ ಘಂಟೆ'ಯಾಗಿ ಸ್ತ್ರೀವಾದಿ ಚಳವಳಿ ಹುಟ್ಟಿಕೊಂಡಿದೆ. ಇದು ಸ್ತ್ರೀಯರಿಗೆ ಮೀಸಲಾದ ಹೋರಾಟದ ಹಾದಿಯಲ್ಲ. ಈ ಹಾದಿಯಲ್ಲಿ ಸ್ತ್ರೀ-ಪುರುಷರಿಬ್ಬರೂ ಸಾಗುವಂತಾಗಬೇಕು. ಮಹಿಳಾ ಪರವಾದ ಹಕ್ಕು ರಕ್ಷಣೆಗಳಿಗಾಗಿ ದುಡಿಯಬೇಕು. ಶತಶತಮಾನಗಳಿಂದಲೂ ಪುರುಷ ಪ್ರಧಾನ ಸಮಾಜ ಮಹಿಳೆಯರನ್ನು ಎರಡನೆಯ ದರ್ಜೆಯ ಪ್ರಜೆಯಾಗಿ ಕಂಡಿದ್ದರಿಂದ ಆಕೆಗೆ ಯಾವುದೇ ಕ್ಷೇತ್ರದಲ್ಲಿಯೂ ತನ್ನನ್ನು ಕ್ರಿಯಾತ್ಮಕವಾಗಿ ತೊಡಗಿಸಿಕೊಳ್ಳಲು ಅವಕಾಶ ದೊರಕಲಿಲ್ಲ. ಇಪ್ಪತ್ತನೇಯ ಶತಮಾನದಲ್ಲಿ ಅಲ್ಪ-ಸ್ವಲ್ಪವಾಗಿ ದೊರೆತ ಅವಕಾಶದಲ್ಲಿ ಅನೇಕ ಸಾಧಕಿಯರು ನಮ್ಮ ಮುಂದಿದ್ದಾರೆ. ಈ ಅವಕಾಶ ಆರಂಭದಿಂದಲೂ ದೊರೆತಿದ್ದರೆ ಮಹಿಳೆ ಇನಷ್ಟು ಸಾಧನಮಾರ್ಗದಲ್ಲಿ ಮುಂದಿರುತ್ತಿದ್ದಳು.

ಇಂದು ಸ್ತ್ರೀವಾದಿ ಚಿಂತನೆಯಲ್ಲಿ ತೊಡಗುವವರನ್ನು ನಿರ್ಲಕ್ಷ್ಯವಾಗಿ ಕೆಲವರು ಪಕ್ಕಕ್ಕೆ ಸರಿಸುತ್ತಾರೆ. ಇನ್ನು ಕೆಲವರು ಸ್ತ್ರೀವಾದಿಗಳು ಅಸಹಜ ಮತ್ತು ಅಸಂಗತವಾದ ವಿವಾದಗಳನ್ನೆಬ್ಬಿಸುತ್ತಾರೆಂದು ದೂರುತ್ತಾರೆ. ಮತ್ತೆ ಕೆಲವರು

ಸ್ತ್ರೀವಾದಿಗಳೇ ಪ್ರೇರಕರೆಂದು ಆಕ್ಷೇಪಿಸುವವರೇ ಹೆಚ್ಚಾಗಿದ್ದರೆ. ಪಾಶ್ಚಾತ್ಯ ನಾಗರಿಕತೆಯ ಪ್ರಭಾವಕ್ಕೆ ಸಿಲುಕಿರುವ ಸದುದ್ದೇಶವಿಲ್ಲದ ಸ್ತ್ರೀಯರು ಇಂತಹ ಸಮಾಜದ್ರೋಹಿ ಚಿಂತನೆಗಳು ಹರಡುತ್ತಿದ್ದಾರಷ್ಟೇ ಎಂಬಂತಹ ಅಪಪ್ರಚಾರಗಳು ಇವೆ. ಈ ಆಪಾದನೆಗಳಿಗೆ ವೈಜ್ಞಾನಿಕವಾಗಿ ತರ್ಕಬದ್ದವಾಗಿ ಪ್ರತಿಕ್ರಿಯಿಸುತ್ತಿರುವುದರಿಂದ ಈಗೀಗ ಸ್ತ್ರೀವಾದಕ್ಕೆ ಒಂದು ಗಟ್ಟಿ ನೆಲೆಗಟ್ಟು ದೊರೆಯುತ್ತಿದೆ. ಎಲ್ಲಾ ಕಾಲ, ದೇಶದ ಸ್ತ್ರೀಯರಿಗೆ ಅನ್ವಯಿಸುವಂತೆ ವಿವರಿಸಬಲ್ಲ ಈ ಎಂಬುದೊಂದು ಇಲ್ಲ. ಇದನ್ನು ಕಾಲ, ನಿರ್ವಚಿಸಿಕೊಳ್ಳಬೇಕಾದ ಅಗತ್ಯವಿದೆ. ದೇಶಗಳ ಸ್ತ್ರೀವಾದಿ ಚಿಂತನೆ ಅಗತ್ಯಗಳಿಗೆ ಅನುಗುಣವಾಗಿ

ಮೊದಲೇ ಹೇಳೀದಂತೆ ಇಂದು ಸ್ತ್ರೀಯರು ಮಾತ್ರವೇ ತೊಡಗಿಸಿಕೊಳ್ಳಬೇಕಾದ ಚಟುವಟಿಕೆಯೂ ಅಲ್ಲ. ವೇದಿಕೆಗಳಿಗೆ ಮಾತ್ರ ಸೀಮಿತವಾದ ಬೌದ್ಧಿಕ ಚರ್ಚೆಯೂ ಅಲ್ಲ. ಬದಲಾಗಿ ವ್ಯವಸ್ಥೆಯೊಂದರೊಳಗೆ ಬದುಕುತ್ತಿರುವ ಪ್ರತಿಯೊಬ್ಬ ನಾಗರಿಕನ ಜವಾಬ್ದಾರಿಯಾಗಿ ಸ್ತ್ರೀವಾದ ಬೆಳೆಯಬೇಕೆಂಬುದು ಸ್ತ್ರೀವಾದಿಗಳ ಆಶಯ. ಯಾವ ಸಮಾಜದಲ್ಲಿಯೂ ಮಹಿಳೆಯರು ಒಂದು ಸ್ವತಂತ್ರ ಸಮುದಾಯವಾಗಿ ಒಟ್ಟಿಗೆ ಕಂಡು ಬರುವುದಿಲ್ಲ. ಆಯಾ ಸಮಾಜ ವರ್ಗ

ಜನಾಂಗ, ವೃತ್ತಿ-ಜಾತಿ ಧರ್ಮ ಮೊದಲಾದವುಗಳಲ್ಲಿ ಅವರು ಹಂಚಿಹೋಗಿದ್ದಾರೆ. ಈ ಭಿನ್ನ ಸಮುದಾಯದ ಮಹಿಳಾ ಸಮಸ್ಯೆಗಳನ್ನು ಕಪ್ಪು ಮಹಿಳೆ, ಮುತ್ತಿನ ಮಹಿಳೆ, ದಲಿತ ಮಹಿಳೆ, ಮುಂತಾದ ಗುಂಪುಗಳಲ್ಲಿ ಗುರುತಿಸಬಹುದು, ಸ್ತ್ರೀವಾದವೆಂಬುದು ಸಮಾಜಿಕವಾಗಿ ಬೆಂಬಲ ಪಡೆದದ್ದು, ಪಾಶ್ಚಾತ್ಯದಲ್ಲಿಯೇ ಹದಿನೆಂಟನೆಯ ಶತಮಾನದಲ್ಲಿ ಹಲವು ಸ್ತ್ರೀಯರು ಮಿತ ಸ್ವಾತಂತ್ರ್ಯದಿಂದ ತಮ್ಮ ಮೌಲ್ಯಗಳಿಗೆ ಬೀಳುತ್ತಿರುವ ಪೆಟ್ಟನ್ನು ತಿಳಿಸಲು, ತಮ್ಮ ಮೇಲಿನ ದೌರ್ಜನ್ಯವನ್ನು ಪ್ರತಿಭಟಿಸಲು ಸಾಹಿತ್ಯವನ್ನು ಪ್ರಮುಖ ಮಾಧ್ಯಮವನ್ನಾಗಿ ಬಳಸಿದರು. ಈ ನಿಟ್ಟಿನಲ್ಲಿ ಹಲವಾರು ಪುಸ್ತಕಗಳು ಬೆಳಕಿಗೆ ಬಂದವು, ತೆರೆಯ ಹಿಂದಿದ್ದ ಮಹಿಳೆಯರಲ್ಲಿ ಒಂದು ವಿಶೇಷ ಜಾಗೃತಿ ಮೂಡಿತು. ಮಹಿಳೆ ಮುಖ್ಯವಾಹಿನಿಗೆ ಬರಬೇಕೆಂಬ ಹಂಬಲ ನಿರಂತರವಾಗಿ ಬೆಳೆಯುತ್ತಾ ಬಂದಿದೆ. ಇದರ ಪರಿಣಾಮವಾಗಿ ಸ್ತ್ರೀವಾದಿ ಚಿಂತನೆ ವ್ಯಾಪಕವಾಗಿ ಬೆಳೆಯಿತು, ಈ ಕೆಳಕಂಡಂತೆ ನಾವುಕಾಣಬಹುದಾಗಿದೆ.

ಅಸ್ತಿತ್ವವಾದಿ ಸ್ತ್ರೀವಾದ ಇಂದಿಗೆ ಸ್ತ್ರೀವಾದ ಎಂದ ತಕ್ಷಣ ನೆನಪಿಗೆ ಬರುವ ಹೆಸರು ಸಿಮನ್ ದ ಬೋವಾ, ಫ್ರೆಂಚ್ ಚಿಂತಕಿಯಾದ ಈಕೆಯ 'ದ ಸೆಕೆಂಡ್ ಸೆಕ್ಸ್' ಕೃತಿ ಅಸ್ತಿತ್ವವಾದಿ ಸ್ತ್ರೀವಾದಿ ಪ್ರಮುಖ ಅಂಶಗಳನ್ನು ಪರಿಚಯಿಸುತ್ತದೆ. ಬೋವಾಳ ಪ್ರಕಾರ ಸ್ತ್ರೀಶೋಷಣೆಯ ಮೂಲ ಅಡಗಿರುವುದು. ಆಕೆ ಪುರುಷನಿಗಿಂತ ಭಿನ್ನವಾದವಳು ಎಂಬ ಕಾರಣಕ್ಕಾಗಿ ಎಂದಿದ್ದಾಳೆ. ಸ್ತ್ರೀಯರನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳಲು ಪುರುಷ ಆಕೆಯನ್ನು ಕುರಿತಂತೆ ಅನೇಕ ಮಿಥೆಗಳನ್ನು ರಚಿಸಿದ್ದಾನೆ. 'ಆದರ್ಶ ಸ್ತ್ರೀ'ಯನ್ನು ಕುರಿತಂತೆ ದೊರೆಯುವ ಅನೇಕ ಕಲ್ಪನೆಗಳು ಪುರುಷ ಸಂಸ್ಕೃತಿಯ ಪ್ರತೀಕಗಳಷ್ಟೇ ಹೊರತು ವಾಸ್ತವಗಳಲ್ಲ. ಸ್ತ್ರೀಯ ಬದುಕನ್ನು ಸುತ್ತುವರೆದಿರುವ ಕೃತಕ ಸಂಕೋಲೆಗಳು ಆಕೆ ಓರ್ವ ಸ್ವತಂತ್ರ ವ್ಯಕ್ತಿಯಾಗಿ ತನ್ನ ಬದುಕನ್ನು ರೂಪಿಸಿಕೊಳ್ಳಲು ಅವಕಾಶವನ್ನೇ ನೀಡುವುದಿಲ್ಲ. ಅಸ್ತಿತ್ವವಾದಿ ಸ್ತ್ರೀವಾದ ಒಂದು ವಿಶಿಷ್ಟ ಸ್ತ್ರೀವಾದ ಕೊಡುಗೆಯಾಗಿದೆ.

ಕಪ್ಪು ಸ್ತ್ರೀವಾದ : ಪುರುಷ ಪ್ರಧಾನ ವ್ಯವಸ್ಥೆಯ ಹಾಗೆಯೇ ಬಿಳಿಯ ಜಗತ್ತು ಕಪ್ಪು ಮಹಿಳೆಯರ ಅನುಭವಗಳನ್ನು ನಿರ್ಲಕ್ಷಿಸಿದೆ ಎಂಬ ಆಪಾದನೆಯೊಂದಿಗೆ, ಕಪ್ಪು ಸೀವಾದವೆಂಬುದು ರೂಪ ಪಡೆದಿದೆ. ಜಾನ್ ಹಿಗಿನ್ಸ್ ಎಂಬಾಕೆ ಈ ವಾದದ ಪ್ರಮುಖ ಚಿಂತಕಿ, ಲೈಂಗಿಕ ದಬ್ಬಾಳಿಕೆಯ ವಿರುದ್ಧ ಹೋರಾಡುವಲ್ಲಿ ಬಿಳಿಯರಂತೆ ತಾವೂ ಭಾಗಿಗಳಾಗ ಬಯಸಿದರೂ ನಮ್ಮೊಂದಿಗೆ ಅವರು ಪ್ರಾಮಾಣಕವಾಗಿ ಜೊತೆಗೂಡಲಾರರು ಎಂಬುದೇ ಕಪ್ಪು ಸ್ತ್ರೀವಾದ ರೂಪುಗೊಳ್ಳಲು ಕಾರಣವೆಂಬುದು ಹಿಗಿನ್ಸ್ ಅಭಿಪ್ರಾಯ, ಕಪ್ಪು ಮಹಿಳೆಯರ ಬದುಕು, ಅನನ್ಯ ಅನುಭವ, ಕಲೆ ಒದಲಾದವುಗಳನ್ನು ಶೋಧಿಸಿಕೊಡುವುದು ಈ ಸ್ತ್ರೀವಾದ ಸಾಹಿತ್ಯದ ಲಕ್ಷಣವಾಯಿತು.

ಮನೋವಿಶ್ಲೇಷಣಾತ್ಮಕ ಸ್ತ್ರೀವಾದ: ಫ್ರಾಯ್ಡನ ಮನೋವಿಶ್ಲೇಷಣಾತ್ಮಕ ಸಿದ್ಧಾಂತದ ಆಧಾರದ ಮೇಲೆಯೇ ಸೈದ್ಧಾಂತಿಕ ಸ್ವರೂಪ ಪಡೆದಿರುವ ಸ್ತ್ರೀವಾದ ಇದಾಗಿದೆ. ಫ್ರಾಯ್ಡ್ನ ಪ್ರಕಾರ ಲಿಂಗ ವ್ಯವಸ್ಥೆ ಎನ್ನುವುದು ಲೈಂಗಿಕ ಪಕ್ವತೆಯ ಒಂದು ಸೃಷ್ಟಿಯಾಗಿದೆ. ಆದರೆ ಇದನ್ನು ಅನೇಕ ಸ್ತ್ರೀವಾದಗಳು ಒಪ್ಪದೆ ಟೀಕಿಸಿದ್ದಾರೆ. ಆದರೆ ಜೂಲಿಯಟ್ ಮಿಷೆಲ್ ಫ್ರಾಯ್ಡ್ ಮನೋವಿಶ್ಲೇಷಣಾ ದೃಷ್ಟಿಕೋನವನ್ನು ಸ್ತ್ರೀವಾದಿ ವಿಶ್ಲೇಷಣೆಗೆ ಒಳಪಡಿಸುವುದರ ಮೂಲಕ ಮನೋವಿಶ್ಲೇಷಣಾತ್ಮಕ ಸ್ತ್ರೀವಾದಕ್ಕೆ ಒಂದು ಹೊಸ ಆಯಾಮವನ್ನು ನೀಡಿದ್ದಾಳೆ. ಮಾನಸಿಕ ಲೈಂಗಿಕ ಅನುಭವಗಳು ಕೇವಲ ಜೈವಿಕ ಕ್ರಿಯೆಗಳಲ್ಲದೆ, ಆಯಾ ಸಮಾಜದ ಸಮಕಾಲೀನ ಪರಿಸ್ಥಿತಿಗಳಿಂದ ಪ್ರಭಾವಿಸಲ್ಪಟ್ಟಿರುತ್ತವೆ ಎಂದು ಅಭಿಪ್ರಾಯ ಪಟ್ಟಿದ್ದಾಳೆ. ಜೈವಿಕ ಕ್ರಿಯೆಗಳನ್ನು ಕುರಿತ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಪುರುಷ ಪ್ರಧಾನ ಮೌಲ್ಯಗಳದೇ ಮೇಲುಗೈ

ಎಂಬುದನ್ನು ಮಿಷೆಲ್ ಒಪ್ಪಿದ್ದಾಳೆ.

ಮಾರ್ಕ್ಸ್‌ವಾದಿ ಸ್ತ್ರೀವಾದ: ಶೋಷಣೆಯ ಮೂಲವಿರುವುದೇ ವರ್ಗ ಅಸಮಾನತೆಯ ದೆಸೆಯಿಂದ ಎಂಬುದು ಮಾರ್ಕ್ಸ್‌ವಾದಿಗಳ ಬಲವಾದ ನಿಲುವು ಸ್ತ್ರೀ ಶೋಷಣೆಗೂ ಇದೇ ಕಾರಣವೆಂಬುದು ಮಾರ್ಕ್ಸ್‌ವಾದಿಗಳ ಅಭಿಪ್ರಾಯ, ಈ ವಾದಕ್ಕೆ ಸೈದ್ಧಾಂತಿಕ ಹಿನ್ನೆಲೆಯನ್ನು ಒದಗಿಸಿದ ಗ್ರಂಥ ಮಾರ್ಕ್ಸ್‌ನ ಮರಣಾಂತರದಲ್ಲಿ ಫೆಡ್ರಿಕ್' ಎಂಗೆಲ್ಸ್ ರಚಿಸಿದ 'ದಿ ಆರಿಜನ್ ಆಫ್ ಫ್ಯಾಮಿಲಿ. ಪ್ರೈವೆಟ್ ಪ್ರಾಪರ್ಟಿ ಅಂಡ್ ದಿ ಸ್ಟೇಟ್' (1845) ಇದರ ಪ್ರಕಾರನ ಸ್ತ್ರೀ ಶೋಷಣೆಯು ಆರಂಭವಾದದ್ದೆ ಖಾಸಗಿ ಸಂಪತ್ತಿನ ಗಳಿಕೆಯಲ್ಲಿ ಮನೆಯಲ್ಲಿಯೇ ಇರುವ ಸ್ತ್ರೀಯರಿಗಿಂತ ಹೊರಗೆ ದುಡಿಯುವ ಮಹಿಳೆಯರನ್ನು ಸಂಘಟಿಸುವುದು ಬಹಳ ಮುಖ್ಯವಾದುದು ಎನ್ನುವ ಅಭಿಪ್ರಾಯ ಮಾರ್ಕ್ಸ್‌ವಾದಿ ಸ್ತ್ರೀವಾದಿಗಳಲ್ಲಿದೆ.

ತೀವ್ರಗಾಮಿ ಸ್ತ್ರೀವಾದ: ಎಪತ್ತರ ದಶಕದಲ್ಲಿ ಮಹಿಳಾ ಸಂಘಟನೆ ಎಂಬುದು ಮಹಿಳೆಯರ ಗುಂಪುಗಳು ತಳೆದಿದ್ದ ವಿಶಿಷ್ಟ ನಿಲುವಾಗಿತ್ತು. ಈ ಗುಂಪುಗಳಲ್ಲಿದ್ದ ಮಹಿಳೆಯರಲ್ಲಿ ಕೆಲವರು ಕಾಲಾನಂತರದಲ್ಲಿ ತಮ್ಮನ್ನು ತೀವ್ರಗಾಮಿ ಸ್ತ್ರೀವಾದಿಗಳೆಂದು ಕರೆದುಕೊಂಡವರು. ಸ್ತ್ರೀ-ಪುರುಷ ಅಸಮಾನತೆಯ ಮೂಲವಾದ 'ಭಿನ್ನ ಜೈವಿಕತೆ'ಯ, ತತ್ತ್ವವನ್ನು ತೀವ್ರಗಾಮಿಗಳು ನಿರಾಕರಿಸುತ್ತಾರೆ. ಲೈಂಗಿಕ ದಾಸ್ಯ ಮತ್ತು ಒತ್ತಾಯದ ತಾಯ್ತನಗಳ ಆಕರವಾದ ಕುಟುಂಬವೇ ಹೆಣ್ಣಿನ ಶೋಷಣೆಯ ಕೀಲಿಕೈ ಎಂಬುದು ತೀವ್ರಗಾಮಿ ಸ್ತ್ರೀವಾದಿಗಳ ಅಭಿಪ್ರಾಯ, ಶುಲಾಮಿತ್ ಫೈರ್ ಸ್ಟನ್ ಬರೆದ The Dialectic of Women ಎನ್ನುವ ಕೃತಿ ತೀವ್ರಗಾಮಿ ಸ್ತ್ರೀವಾದ ಮೊದಲ ಉದಾಹರಣೆಯಾಗಿದೆ. ಇವಳ ಪ್ರಕಾರ ಮಹಿಳೆಯನ್ನು ಮಾಲೀಕಳನ್ನಾಗಿಸುವ ಪ್ರತಿಭಟನೆಯಾಗಿ ತೀವ್ರಗಾಮಿ ಸ್ತ್ರೀವಾದ ರೂಪು ತಳೆದಿದೆ. ಫೈರ್ ಸ್ಟನ್‌ಳ ಅನಂತರದಲ್ಲಿ ಮೇರಿ ಡಾಟಿ ಮತ್ತು ಸೂಸನ್ ಗಿಫನ್ ಅವರು ಗಮನಾರ್ಹವಾಗಿದ್ದರೆ, ತಾಯ್ತನದವನ್ನು ಕಡೆಗಣಿಸಿ ವೈಜ್ಞಾನಿಕ ತಂತ್ರದ ನೆರವನಿಂದ ಕೃತಕ ವಿಧಾನಗಳನ್ನು ಅಳವಡಿಸಿ, ಸ್ತ್ರೀ-ಪುರುಷರು ಸಂತಾನೋತ್ಪತ್ತಿಯ ಕ್ರಿಯೆಯಲ್ಲಿ ಪಾಲ್ಗೊಂಡಾಗ ಜೈವಿಕ ಸಂತಾನೋತ್ಪತ್ತಿಯ ಹೆಸರಿನಲ್ಲಿ ನಡೆಯುತ್ತಿರುವ ಸ್ತ್ರೀಯ ದಮನ ನಿಲ್ಲುತ್ತದೆ ಎಂಬುದು ಫೈರ್ ಸ್ಟೋನ್ನಿಳ ವಾದ.

ಉದಾರವಾದಿ ಸ್ತ್ರೀವಾದಿ: ಮೇರಿ ವೊಲ್‌ಸ್ಟನ್ ಕ್ರಾಫ್ಟ್ ಮತ್ತು ಜಾನ್‌ಸ್ಟುವರ್ಟ್ ದಂಪತಿಗಳು ಹಾಗೂ ಹ್ಯಾರಿಯಟ್ ಟೇಲರ್ ಮಿಲ್ ಈ ವಾದದ ಪ್ರಮುಖ ವಕ್ತಾರರು. ಎ ಎಂಡಿಕೇಷನ್ ಆಫ್ ದಿ ರೈಟ್ಸ್ ಆಫ್ ವುಮನ್ (1792), ದಿ ಸಭೆಕ್ಷನ್ ಆಫ್ ವಿಮನ್ (1896), ಡಿ.ಎನ್. ಫ್ರಾನ್ಸ್‌ಚೈಸ್‌ಮೆಂಟ್ ಆಫ್ ವುಮೆನ್ (1851) ಕೃತಿಗಳು ಉದಾರವಾದಿ ಸ್ತ್ರೀವಾದದ

ನಿಲುವುಗಳನ್ನು ಒಳಗೊಂಡ ಪ್ರಮುಖ ಕೃತಿಗಳು, ಸತಿ-ಪತಿಯರಾಗಿದ್ದ ಟೇಲರ್ ಮತ್ತು ಸ್ಟುವರ್ಟ್ ಸ್ತ್ರೀ ಸಮಾನತೆಯನ್ನು ಕುರಿತಂತೆ ಭಿನ್ನವಾದಂತಹ ನಿಲುವುಗಳನ್ನು ಕಳೆದಿದ್ದರು. ಸ್ತ್ರೀ ಮನೆಯ ಹೊರಗಡೆ ದುಡಿಯಬೇಕು. ಆ ಮೂಲಕ ಆರ್ಥಿಕ ಸಬಲತೆ ಸಾಧಿಸಬೇಕು ಎಂಬುದು ಟೇಲರ್ ಅಭಿಪ್ರಾಯವಾದರೆ, ಸ್ಟುವರ್ಟ್ ಸ್ತ್ರೀ ತನ್ನ ಇಚ್ಛೆಗೆ ಅನುಸಾರವಾಗಿ ಶ್ರೀ ದುಡಿಮೆಯಲ್ಲಿ ತೊಡಗುವ ಅಥವಾ ಬಿಡುವ ಮತ್ತು ಸ್ವಯಂ ಅಧಿಕಾರ ಮುಂತಾದ ಗುಣಗಳಿಗೆ ಮಹತ್ವ ನೀಡಿದ್ದು, ಸ್ತ್ರೀ ಭಾವುಕತೆಯಿಂದ ದೂರವಿರಬೇಕೆಂಬ ಅಭಿಪ್ರಾಯ ಹೊಂದಿದ್ದಳು, 'ದಿ ಪೆನಿನೈನ್ ಮಿಸ್ಟಿಕ್ ಮತ್ತು ದಿ ಸೆಕೆಂಡ್ ಸೈನ್ಸ್ ಕೃತಿಗಳಲ್ಲೂ ಉದಾರವಾದಿ ಸ್ತ್ರೀವಾದಿ ಚಿಂತನೆಗಳಿವೆ, ಬೆಟ್ಟ ಫ್ರೀಡನ್ ಈ ರಚನೆಗಳ ಮೂಲಕ ಪ್ರಮುಖ ಉದಾರವಾದಿ ಸ್ತ್ರೀವಾದಿ ಎನಿಸಿದ್ದಾಳೆ. 1963 ರಲ್ಲಿ ಪ್ರಕಟವಾದ ದಿ ಫೆಮಿನೈನ್ ಮಿಸ್ಟಿಕ್‌ನಲ್ಲಿ ಸ್ತ್ರೀಯನ್ನು ಹೆಂಡತಿ ಅಥವಾ ತಾಯಿ ಎನ್ನುವ ಸಾಂಪ್ರದಾಯಿಕ ಚೌಕಟ್ಟುಗಳಲ್ಲಿ ಬಂಧಿಸಿ ಸ್ತ್ರೀಯ ವ್ಯಕ್ತಿತ್ವದ ಪರಿಪೂರ್ಣ ಹಾಗು ಸಮಗ್ರ ವಿಕಸನಕ್ಕೆ ಸಮಾಜರ ತರುವ ಅಡ್ಡಿಗಳನ್ನು ಪ್ರಶ್ನಿಸಿದ್ದಾಳೆ. ಹಾಗೂ ಈ ಸಂಕೋಲೆಗಳಿಂದ ಬಿಡುಗಡೆಗೊಳ್ಳಲು ಮನೆಯ ಹೊರಗೆ ದುಡಿಮೆಯಲ್ಲಿ ತೊಡಗಿಕೊಳ್ಳುವ ಅಗತ್ಯವನ್ನು ತಿಳಿಸುತ್ತಾ ಸ್ತ್ರೀವಾದದ ಸ್ಥಾನವನ್ನು ಮಾನವತಾ ಆಶಯವನ್ನು ಮುಂದಿಟ್ಟಿದ್ದಾಳೆ. ಸ್ತ್ರೀಪುರುಷರಿಗೆ ಸಮಾನಳಾಗಲು ತಾಯ್ತನವನ್ನಾಗಲಿ, ವಿವಾಹವನ್ನಾಗಲೀ ತಿರಸ್ಕರಿಸುವ ಅಗತ್ಯವಿಲ್ಲ ಎಂಬುದನ್ನು ಸ್ಪಷ್ಟಪಡಿಸಿದ್ದಾಳೆ. ಸ್ತ್ರೀ-ಪುರುಷ ಸಮಾನತೆ ಸ್ಥಾಪನೆಯಾಗಬೇಕಾದರೆ ಸಮಾನತೆಗೆ ಅಡ್ಡಿಬಂದಿರುವ ಕಾಯಿದೆಗಳನ್ನು ಕಿತ್ತೊಗೆಯಬೇಕು. ಸಂಪನ್ಮೂಲಗಳ ಅನುಭೋಗ ಹಾಗೂ ವಿತರಣೆಗಳಲ್ಲಿ ಕಂಡು ಬರುವ ಅಸಮಾನತೆಯನ್ನು ತೊಡೆದು ಹಾಕಬೇಕೆಂಬುದು ಉದಾರವಾದಿ ಚಿಂತಕರ ಧ್ಯೆಯವಾಗಿದೆ. ಇಂದು ಸಮಾಹನತೆ ಅಡ್ಡಿ ಬರುವ ಕಾಯಿದೆಗಳನ್ನು ತೆಗೆದು ಸಮಾನತೆಯ ಸಂವಿಧಾನಗಳೇ ಅಸ್ತಿತ್ವಕ್ಕೆ ಬಂದರು ಯಾವುದೇ ಸಮಾಜದಲ್ಲಿ ಸಂಪೂರ್ಣ ಲಿಂಗಸಮಾನತೆ ಸಾಧ್ಯವಿಲ್ಲ.

ಲೆಸ್ಬಿಯನ್ ಸ್ತ್ರೀವಾದ: ಪ್ರಕೃತಿಯ ನಿಯಮವಲ್ಲದ ಸಲಿಂಗ ರತಿಯನ್ನು ಉಲ್ಲೇಖಿಸುವ ಪದ ಲೆಸ್ಬಿಯನ್, ಇವರ ಪ್ರಕಾರ ದ್ವಿಲಿಂಗತ್ವ ಪ್ರಕೃತಿ ನಿಯಮವಲ್ಲ. ಸಂಸ್ಕೃತಿಯ ಸೃಷ್ಟಿ, ಹಾಗಾಗಿ ಯಾವುದೇ ಬಗೆಯ ಸಾಮಾಜಿಕ ಸಂಬಂಧಗಳನ್ನು

ಕಿತ್ತೊಗೆದು ಪುರುಷ ಸಂಸ್ಕೃತಿಯ ಬಳುವಳಿಯಾದ ದ್ವಲಿಂಗ ಸಂಬಂಧವನ್ನು ತಿರಸ್ಕರಿಸುವ, ಸಲಿಂಗ ಸಂಬಂಧಗಳನ್ನು ಆಯ್ಕೆ ಮಾಡಿಕೊಳ್ಳುವ ಹಕ್ಕು ಸ್ತ್ರೀಯರಿಗಿದೆ ಎಂಬುದು ಇವರ ನಿಲುವು, ಇತರ ಸ್ತ್ರೀವಾದಗಳು ಇವರನ್ನು ಕೀಳಾಗಿ ಕಂಡರೂ ತಮ್ಮ ದಿಟ್ಟ ನಿಲುವಿನೊಂದಿಗೆ ತಮ್ಮ ವಾದಕ್ಕೆ ಭದ್ರತೆಯನ್ನು ಕಂಡುಕೊಳ್ಳುವ ಪ್ರಯತ್ನ ನಡೆಸುತ್ತಿದ್ದಾರೆ.

ಅಮೆರಿಕಾದ ಸ್ತ್ರೀವಾದ: ಅಮೆರಿಕಾದಲ್ಲಿ ಸ್ತ್ರೀವಾದಿತ್ವವನ್ನು ಹುಟ್ಟುಹಾಕಿದವರು ವಿದ್ಯಾವಂತ ಮಹಿಳೆಯರು ಅದರಲ್ಲೂ ಪತ್ರಕರ್ತೆಯರು ಬಹಳ ಮುಖ್ಯರಾದವರು. ಮಹಿಳೆಯನ್ನು ಓದುಗಳನ್ನಾಗಿ ಪರಿಗಣಿಸುವುದಷ್ಟೆ ಅಲ್ಲ ಅವಳ ಸೃಜನಶೀಲ ಬರಹಗಳ ಮೂಲಕ ವ್ಯಕ್ತಗೊಂಡ ಹೆಣ್ಣಿನ ಅಭಿಪ್ರಾಯಗಳನ್ನು ಗೌರವಿಸುವ, ಒಪ್ಪಿಕೊಳ್ಳುವಂತಾಗಬೇಕೆಂಬುದು ಇವರ ನಿಲುವು, ಸ್ತ್ರೀವಾದ ವಿಮರ್ಶಕರು ಇತರರು ಸಾಹಿತ್ಯದಲ್ಲಿ ಮಹಿಳೆಯರನನ್ನು ಪ್ರತಿಪಾದಿಸುವುದಕ್ಕೂ ಸಮಾಜದಲ್ಲಿ ಅವರು ಬದುಕುತ್ತಿರುವ ಕೆಟ್ಟಸ್ಥಿತಿಗೂ ಸಾಕಷ್ಟು ಸಾಮತ್ಯ ಇದೆಯಾದ ಕಾರಣ ಹೆಣ್ಣಿನ ಭಾವನೆಗಳು ಅವಳಿಂದಲೇ ವ್ಯಕ್ತವಾಗಬೇಕು ಎಂಬುದು ಇವರ ನಿಲುವು.

ಭಾರತೀಯ ಸ್ತ್ರೀವಾದ: ಪಾಶ್ಚಾತ್ಯರ ಪ್ರಭಾವಕ್ಕೆ ಒಳಗಾದ ಭಾರತವೂ ಸ್ತ್ರೀವಾದಿ ಹೋರಾಟದ ಕಲ್ಪನೆಯನ್ನು ತನ್ನಲ್ಲೂ ಗುರುತಿಸಿಕೊಂಡಿದೆ. ಭಾರತದ ಬಹು ಸಂಸ್ಕೃತಿಯಲ್ಲಿ ಹೆಣ್ಣು ಉನ್ನತವರ್ಗದಿಂದ ಹಿಡಿದು ಎಲ್ಲಾ ವರ್ಗಗಳಲ್ಲೂ ತುಳಿತಕ್ಕೆ ಒಳಗಾದವಳೇ, ಹಿಂದೂ ಧರ್ಮಶಾಸ್ತ್ರಗಳಲ್ಲಿ ಉಕ್ತವಾದಂತೆ ಸ್ತ್ರೀ ವೇದಗಳನ್ನೋದಬಾರದು. ಸ್ವಾತಂತ್ರ್ಯಕ್ಕೆ ಅರ್ಹಳಲ್ಲ, ಪುರುಷನ ಆಶ್ರಯವೇ ಹೆಣ್ಣಿಗೆ ಸೂಕ್ತ ಮುಂತಾದ ಹೇಳಿಕೆಗಳನ್ನೇ ನಂಬಿ ಸ್ತ್ರೀಯನ್ನು ಅಡುಗೆ ಮನೆಗೆ ಮೀಸಲಿಟ್ಟ ಈ ಸಮಾಜದಲ್ಲಿ ಸ್ತ್ರೀಯರನ್ನು ದೈವತ್ವಕ್ಕೇರಿಸಿ ಇಲ್ಲವೆ ದೆವ್ವತ್ವಕ್ಕೆ ಇಳಿಸಿ ಅಂತರಪಿಶಾಚಿಯಾಗಿಸಿ ಬಿಟ್ಟ ಸಂಸ್ಕೃತಿ ಇಲ್ಲಿದೆ. ಹೀಗಾಗಿ ಹೆಣ್ಣು ವಿದ್ಯೆ, ವಿಜ್ಞಾನ ವೈಚಾರಿಕೆಗಳಿಂದ ದೂರ ಉಳಿಯಬೇಕಾಯಿತು. ಹೆಣ್ಣನ್ನು ಮನೆಗೆಲಸಕ್ಕೆ ಸೀಮಿತಗೊಳಿಸಿದ ಈ ಸಮಾಜದಲ್ಲಿ ಹೆಣ್ಣು ದೈಹಿಕ ಹಾಗೂ ಮಾನಸಿಕ ಯಾತನೆಗೆ ನಿರಂತರವಾಗಿ ಬಲಿಯಾಗುತ್ತಿದ್ದಳು. ಪಶ್ಚಿಮದ ಪ್ರಭಾವದಿಂದ ಇಲ್ಲಿನ ಮಹಿಳೆಗೂ ಪ್ರಶ್ನಿಸುವ ಹಕ್ಕು ಪಡೆಯುವ ಹಂಬಲ ಹೆಚ್ಚಿತು. ಆರ್ಥಿಕ, ಶೈಕ್ಷಣಿಕ, ಸಾಮಾಜಿಕ, ರಾಜಕೀಯ ಸ್ವಾತಂತ್ರ್ಯಗಳನ್ನು ಪಡೆಯುವ ಸಲುವಾಗಿ ಈವರೆಗೂ ನಿರಂತರವಾದ ಹೋರಾಟಗಳು ನಡೆಯುತ್ತಲೇ ಇವೆ. ಈ ಹೋರಾಟಕ್ಕೆ ಸರ್ಕಾರ ಮತ್ತು ಸಾಮಾನ್ಯರೆಲ್ಲರೂ ಬೆಂಬಲಿಗರಾಗಿದ್ದಾರೆ. ಮಹಿಳಾ ಶಕ್ತಿಯನ್ನು ಬಲಗೊಳಿಸುವ ಸಲುವಾಗಿ ಮಾನವ ಹಕ್ಕು ಆಯೋಗ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಮಹಿಳಾ ಸ್ವಸಹಾಯ ಸಂಘಟನೆಗಳು ಮಕ್ಕಳ ದೌರ್ಜನ್ಯ ವಿರುದ್ಧ ದುಡಿಯುತ್ತಿವೆ. ಹೆಣ್ಣು ಶೈಕ್ಷಣಿಕ, ಆರ್ಥಿಕ, ರಾಜಕೀಯ ಸ್ವತಂತ್ರ ಪಡೆದ ಮೇಲೂ ಹಲವು ಬಗೆಯಲ್ಲಿ ದೌರ್ಜನ್ಯಕ್ಕೆ ಒಳಗಾಗುತ್ತಿರುವ ಕಾರಣ ಮಹಿಳಾ ಸಂಘಟನೆಗಳು ಇನ್ನೂ ಹೆಚ್ಚೆಚ್ಚು ಬಲಿಷ್ಠವಾಗಬೇಕಾಗಿದೆ.

## ಪರಾಮರ್ಶನ ಗ್ರಂಥಗಳು


1. ಭಾರತೀಯತೆ ಮತ್ತು ಸ್ತ್ರೀವಾದ ಧರಣೀದೇವಿ ಮಾಲಗತ್ತಿ
2. ಅಶ್ವಿನಿ ಮಹಾಜ್ (ಮೂಲ) 1998-ಜಾಗತೀಕರಣ ಮತ್ತು ಉದ್ಯೋಗ ಸ್ವದೇಶಿ ಜಾಗರಣ ಮಂಚ್, ಕರ್ನಾಟಕ
3. ಸ್ತ್ರೀವಾದ-ಬಿ.ಎನ್.ಸುಮಿತ್ರಬಾಯಿ